# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
## ಬ್ಯಾಟರಾಯನಪುರ ಉಪ ವಿಭಾಗ, ವಾರ್ಡ್ ನಂ. 06(ಥಣಿಸಂದ್ರ)
## ವಾರ್ಡ್‌ಸಮಿತಿ ಸಭೆ, ದಿನಾಂಕ: 06-08-2022ರ
## ಸಭಾ ನಡುವಳಿ

**ದಿನಾಂಕ: 06-08-2022**ರಂದು ಬೆಳ್ಳಿಗೆ 11.00 ಗಂಟೆಗೆ ವಾರ್ಡ್ ನಂ.06 ಥಣಿಸಂದ್ರ ವಾರ್ಡ್ ಸಮಿತಿಯ ನೋಡಲ್ ಅಧಿಕಾರಿಗಳಾದ **ಶ್ರೀ ಬಿ. ಎಸ್. ಶ್ರೀಧರ್ ಸಹಾಯಕ ಕಾರ್ಯಪಾಲಕ ಅಭಿಯಂತರರು** ರವರ ಅಧ್ಯಕ್ಷತೆಯಲ್ಲಿ ಹೆಗಡೆನಗರ 2ನೇ ಮುಖ್ಯರಸ್ತೆ, 4ನೇ ಅಡ್ಡರಸ್ತೆ, ಬಿ.ಬಿ.ಎಂ.ಪಿ ಸಮುದಾಯ ಭವನದಲ್ಲಿ ನಡೆದ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು.

| ಕ್ರ.ಸಂ | ಸಭೆಗೆ ಹಾಜರಾಗಿರುವ ಅಧಿಕಾರಿಗಳು | ಹುದ್ದೆ |
|---|---|---|
| 1 | ಶ್ರೀ ಬಿ. ಎಸ್. ಶ್ರೀಧರ್ | ನೋಡಲ್ ಅಧಿಕಾರಿಗಳು, ವಾರ್ಡ್ ನಂ 06(ಥಣಿಸಂದ್ರ) ಹಾಗೂ ಸ.ಕಾ.ಅ ಬಿ.ಬಿ.ಎಂ.ಪಿ |
| 2 | ಶ್ರೀ ಸುರೇಶ್ ದೇವತರಾಜ್ | ಸಹಾಯಕ ಅಭಿಯಂತರರು ಹಾಗೂ ಸದಸ್ಯ ಕಾರ್ಯದರ್ಶಿ, ವಾರ್ಡ್ ಸಮಿತಿ, ವಾರ್ಡ್ ನಂ 06(ಥಣಿಸಂದ್ರ) |
| 3 | ಶ್ರೀಮತಿ ಡಾ॥ ಅಲೀನಾ ಜನ್ನತ | ಆರೋಗ್ಯ ವೈಧ್ಯಾಧಿಕಾರಿಗಳು, ಪ್ರಾಥಮಿಕ್ ಆರೋಗ್ಯ ಕೇಂದ್ರ, ಥಣಿಸಂದ್ರ |
| 4 | ಶ್ರೀ ಸಂತೋಷ ಕುಮಾರ ಜೆ. | ಸ.ಅ ರಸ್ತೆ ಮೂಲ ಭೂತಸೌಕರ್ಯ್ ವಿಭಾಗ |
| 5 | ಕು. ನಂದನ ಸಿ.ಎನ್ | ಸ.ಅ, ಬಿ.ಡಬ್ಲ್ಯೂ.ಎಸ್.ಎಸ್.ಬಿ (ನಿರ್ವಹಣೆ) |
| 6 | ಶ್ರೀ ಚೌಡಪ್ಪ | ಸಹಾಯಕ ಸಬ್ ಇನ್ಸ್‌ಪೆಕ್ಟರ್, ಸಂಪಿಗೆಹಲ್ಲಿ ಪೋಲಿಸ್ ಠಾಣೆ, ಬೆಂಗಳೂರು |
| 7 | ಶ್ರೀ ನಂಜುಂಡಪ್ಪ | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |
| 8 | ಶ್ರೀಮತಿ ಕಾಂತಾಮಣಿ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 06 (ಥಣಿಸಂದ್ರ) |

ಶ್ರೀ ಸುರೇಶ್ ದೇವತರಾಜ್ ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಮಿತಿಯ ಸಭೆಗೆ ಹಾಜರಾಗಿದ್ದ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರಿಗೆ ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸುತ್ತಾ ವಾರ್ಡ್ ಸಮಿತಿಯ ಸಭೆಯಲ್ಲಿ ಚರ್ಚಿಸಬೇಕಾದ ಅಜೆಂಡಾ ವಿಷಯದ ಬಗ್ಗೆ ತಿಳಿಸಿದರು.

1. **ಹಿಂದಿನ ಸಭೆಯಲ್ಲಿ ಚರ್ಚಿಸಿಲಾಗಿರುವ ವಿಷಯಗಳ ಬಗ್ಗೆ:** ಪ್ರಥಮವಾಗಿ ಹಿಂದಿನ ಸಭೆಯಲ್ಲಿ ಚರ್ಚಿಸಲಾಗಿರುವ ವಿಷಯಗಳ ಬಗ್ಗೆ ವಿವರವನ್ನು ಸದಸ್ಯ ಕಾರ್ಯದರ್ಶಿಗಳು ಸಭೆಯ ಗಮನಕ್ಕೆ ತಿಳಿಸಿದರು.

2. **ಕೋವಿಡ್ –19_ಸೋಂಕು ಹರಡವುದನ್ನು ತಡೆಗಟ್ಟುವ ಬಗ್ಗೆ :** ಕಳೆದ 24 ಗಂಟೆಯ Covid ಪ್ರಕರಣಗಳು ಹೆಚ್ಚಾಗಿದ್ದು, ಸಾರ್ವಜನಿಕರು ಮಾಸ್ಕ್ ಕಡ್ಡಾಯವಾಗಿ ಹಾಕಬೇಕು ಎಂದು ಆರೋಗ್ಯ ವೈದ್ಯಾದಿಕಾರಿಗಳು ಪ್ರಾಥಮಿಕ್ ಆರೋಗ್ಯ ಕೇಂದ್ರ ಹೆಗಡೆನಗರ ರವರು ತಿಳಿಸಿದರು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಬಹಳಷ್ಟು ಸಾರ್ವಜನಿಕರು Booster Dose ತೆಗದುಕೊಳ್ಳುವುದು ಬಾಕಿವಿದ್ದು, ಆದ್ದರಿಂದ ಸಾರ್ವಜನಿಕರು ಶೀಘ್ರವಾಗಿ Booster Dose ಲಸಿಕೆ ಪಡೆದುಕೊಳ್ಳುವಂತೆ ಸಭೆಗೆ ತಿಳಿಸಿದರು.

3. **ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ:**

- ಸಾರ್ವಜನಿಕರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಸಮರ್ಪಕವಾಗಿ ಆಗುತ್ತಿಲ್ಲವೆಂದು ತಿಳಿಸಿ ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಕೋರಿದರು.
- **ಶ್ರೀ ದಾಸಪ್ಪ ಹೆಗಡೆನಗರ** ರವರು ವಾರ್ಡ್ ವಾಪ್ತಿಯಲ್ಲಿ ಅಂಗಡಿಗಳಲ್ಲಿ ಹಾಗು ಬೀದಿಬದಿ ವ್ಯಾಪಾರಿಗಳು ಪ್ಲಾಸ್ಟಿಕ್ ಚೀಲಗಳನ್ನು ಬಳಸುತ್ತಿದ್ದು, ಈ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ಪ್ಲಾಸ್ಟಿಕ್ ಕವರುಗಳನ್ನು seize ಮಾಡಲು ಕ್ರಮ ವಹಿಸಬೇಕಾಗಿ ಹಾಗೂ ಸಾರ್ವಜನಿಕರು ಪ್ಲಾಸ್ಟಿಕ್ ಕವರುಗಳನ್ನು ಬಳಸದಂತೆ Awareness ನೀಡಬೇಕಾಗಿ ಕೋರಿದರು.
- **ದಾಸಪ್ಪ ಹೆಗಡೆನಗರ** ರವರು ಮಾತನಾಡಿ, ತರಕಾರಿ ಅಂಗಡಿಗಳಿಂದ ಘನತ್ಯಾಜ್ಯ ಬಹಳಷ್ಟು ಬರುತ್ತಿದ್ದು, ಅಂಗಡಿ ಮಾಲೀಕರು ತ್ಯಾಜ್ಯವನ್ನು ರಸ್ತೆಯ ಬದಿಯಲ್ಲಿ ಬಿಸಾಡುತ್ತಿರುವುದರಿಂದ ಕೊಳೆತು ದುರ್ವಾಸನೆ ಬರುತ್ತಿದ್ದು ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುತ್ತದೆಂದು ತಿಳಿಸಿದರು ಹಾಗೂ ಈ ಬಗ್ಗೆ ಸಂಬಂದಪಟ್ಟ ಆರೋಗ್ಯ ಪರಿವೀಕ್ಷಕರು ಪರಿಶೀಲಿಸಿ ಕ್ರಮವಹಿಸಲು ಕೋರಿದರು.

4. **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಒಳಚರಂಡಿಗೆ ಸಂಬಂದಿಸಿದ ವಿಷಯಗಳ ಬಗ್ಗೆ :**

- ಸಹಾಯಕ ಅಭಿಯಂತರರು ಮಾತನಾಡಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ವತಿಯಿಂದ ಕಾವೇರಿ ಮಾತನಾಡಿ P&T ಬಡಾವಣೆ, ಅಂಜನಾದ್ರಿ ಬಡಾವಣೆ, ರಾಚೆನಹಳ್ಳಿ, ಅಬುಬಕ್ಕರ್ ಮಸೀದಿ ರಸ್ತೆ, ಬಲೂನ್ ಫ್ಯಾಕ್ಟರಿ ರಸ್ತೆಗಳಲ್ಲಿ ಕಾವೇರಿ ಕುಡಿಯುವ ನೀರಿನ ಟೆಸ್ಟಿಂಗ್ ಕಾರ್ಯ ಬಾಕಿವಿದ್ದು ಇದರಿಂದಾಗಿ ಬಿಬಿಎಂಪಿ ವತಿಯಿಂದ ಡಾಂಬರೀಕರಣ ಕೆಲಸ ಕೈಗೊಳ್ಳಲು ಸಾದ್ಯವಾಗುತ್ತಿರುವುದಿಲ್ಲ. ಸಾರ್ವಜನಿಕರಿಂದ ಪ್ರತಿದಿನ ಡಾಂಬರೀಕರಣ ಕೈಗೊಳ್ಳುವಂತೆ ಬಹಳಷ್ಟು ದೂರು ಬರುತ್ತಿರುವುದರಿಂದ ಕೂಡಲೆ ಟೆಸ್ಟಿಂಗ್ ಕಾರ್ಯ ಕೈಗೊಂಡು ಪೂರ್ಣಗೊಳಿಸಲು ಕ್ರಮ ವಹಿಸಬೇಕಾಗಿ ಹಾಗೂ ಬಿಬಿಎಂಪಿ ಇಂಜಿನಿಯರಿಗ್ ಉಪ ವಿಭಾಗಕ್ಕೆ ತಿಳಿಸುವುದಕ್ಕೆ ಕೋರಿದರು.
- **ಅಂಜನಾದ್ರಿ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಮಾತನಾಡಿ** ಅಂಜನಾದ್ರಿ ಬಡಾವಣೆ, ಥಣಿಸಂದ್ರ ಶಾಲೆಯ ಹಿಂಬಾಗ ರಸ್ತೆಯಲ್ಲಿ, ಬಿಬಿಎಂಪಿ ವತಿಯಿಂದ ಹೊಸದಾಗಿ ಕೊಳವೆ ಬಾವಿ ಕೊರೆದು PUMP MOTOR ಅಳವಡಿಸಿದ್ದು, ವಿದ್ಯುತ್ ಸಂಪರ್ಕ ಬಾಕಿವಿರುವುದಾಗಿ ತಿಳಿಸುತ್ತಾ ಕೂಡಲೆ ವಿದ್ಯುತ್ ಸಂಪರ್ಕ ಪಡೆದು ಕೊಳವೆ ಬಾವಿಯಿಂದ ಕುಡಿಯುವ ನೀರು ಸರಬರಾಜು ಮಾಡಲು ಕೋರಿದರು.

5. **ವಾರ್ಡ್ ವ್ಯಾಪ್ತಿಯಲ್ಲಿನ ಅಭಿವೃದ್ಧಿ ಕಾಮಗಾರಿಗಳ ಬಗ್ಗೆ :**

- ವಾರ್ಡ್ ಅಭಿಯಂತರರು ಮಾತನಾಡಿ ದಾಸರಹಳ್ಳಿ ಗ್ರಾಮದ ಕುವೆಂಪುನಗರ ಬಡಾವಣೆಯಲ್ಲಿ ಈಗಾಗಲೇ ಸಿವಿಲ್ ಕಾಮಗಾರಿಗಳು ಪೂರ್ಣಗೊಂಡಿದ್ದು, ಡಾಂಬರೀಕರಣ ಕಾಮಗಾರಿ ಮತ್ತು ಕಾಂಕ್ರೀಟ್ ರಸ್ತೆ ಕಾಮಗಾರಿ ಬಾಕಿವಿರುವುದಾಗಿ ತಿಳಿಸಿದರು. ಹಾಗೂ ಭರತ ನಗರದ ಅಡ್ಡ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಿರುವುದಾಗಿ ತಿಳಿಸಿದರು. ಥಣಿಸಂದ್ರ ಕಾಲೋನಿ ರಸ್ತೆಗಳಿಗೆ ಕಾಂಕ್ರೀಟ್ ರಸ್ತೆಗಳನ್ನು ನಿರ್ಮಿಸಿರುವುದಾಗಿ ಹಾಗೂ ಥಣಿಸಂದ್ರ ಗ್ರಾಮದಲ್ಲಿ ಸಹ ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಮತ್ತು ಸರಾಯಿಪಾಳ್ಯದ ಅಡ ರಸ್ತೆಗಳಲ್ಲಿ ಕಾಂಕ್ರೀಟ್ ರಸ್ತೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತವೆ ಎಂದು ಸಭೆಯಲ್ಲಿ ತಿಳಿಸಿದರು.
- **ಶ್ರೀ ಸಂತೋಷ ಸ.ಅ ರಸ್ತೆ ಮೂಲಭೂತಸೌಕರ್ಯ ವಿಭಾಗ ರವರು ಮಾತನಾಡಿ ಥಣಿಸಂದ್ರ ಮುಖ್ಯರಸ್ತೆ** – ನಾಗವಾರ ವೃತ್ತದಿಂದ ರೇವ ಸರ್ಕಲ್ ವರೆಗೆ ಚರಂಡಿ ಮತ್ತು ಪಾದಚಾರಿ ಮಾರ್ಗ ಅಭಿವೃದ್ದಿ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿದ್ದು ಸೆಪ್ಟಂಬರ್ ಮಾಹೆಯಲ್ಲಿ ಕಾಮಗಾರಿ ಪ್ರಾರಂಬಿಸಲಾಗುವುದು ಎಂದು ತಿಳಿಸಿದರು.

6. **ವಿದ್ಯೂತ್ ದೀಪಗಳ ನಿರ್ವಹಣೆ ಬಗ್ಗೆ**

- **ಶ್ರೀ ದಾಸಪ್ಪ ಹೆಗಡೆನಗರ ರವರು ಮಾತನಾಡಿ** ಬಿ.ಬಿ.ಎಂ.ಪಿ ಯಲಹಂಕ ವಲಯದ ವಿದ್ಯೂತ್ ಶಾಖೆ ವತಿಯಿಂದ ಹೆಗಡೆನಗರದಲ್ಲಿ ಹೊಸದಾಗಿ ಎಲ್.ಇ.ಡಿ ಬಲ್ಬಗಳು ಅಳವಡಿಸಲು ಸರ್ವೇ ಮಾಡಲಾಗಿದ್ದು, ಅದರಂತೆ ಹೆಗಡೆನಗರದಲ್ಲಿ ಹೊಸದಾಗಿ ಎಷ್ಟು ಎಲ್.ಇ.ಡಿ ಬಲ್ಬಗಳು ಅಳವಡಿಸಲಾಗಿದೆ ಎಂಬ ಬಗ್ಗೆ ಮಾಹಿತಿ ಕೋರಿದರು.
- **ಶ್ರೀ ಶಿವಯ್ಯ ಹೆಗಡೆನಗರ ರವರು ಮತನಾಡಿ** ಹೆಗಡೆನಗರದಲ್ಲಿ ವಿದ್ಯೂತ್ ದೀಪಗಳ ನಿರ್ವಹಣೆ ಕಾರ್ಯ ಸಮರ್ಪಕವಾಗಿ ಮಾಡಲಾಗುತ್ತಿದೆ ಎಂದು ತಿಳಿಸಿದರು.

7. **ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು.**

- **ಶ್ರೀನಿವಾಸ್‌ರಾವ್ ಅಮರಜ್ಯೋತಿ ನಗರ ರವರು ಮಾತನಾಡಿ** ಥಣಿಸಂದ್ರ ಮುಖ್ಯ ರಸ್ತೆಯಲ್ಲಿ Reliance ಮುಂಬಾಗ ಈ ಹಿಂದೆ ಅಂಬೇಡ್ಕರ್ ಆಟದ ಮೈದಾನಕ್ಕಾಗಿ ಜಾಗವನ್ನು ಕಾಯ್ದಿರಿಸಲಾಗಿದ್ದು. ಈ ಜಾಗದಲ್ಲಿ ಈ ಹಿಂದೆ ಅಳವಡಿಸಿರುವ **ಅಂಬೇಡ್ಕರ್ ಆಟದ ಮೈದಾನವೆಂದು** ಬೋರ್ಡ್ ಯಾರೋ ತೆಗೆದು ಹಾಕಿರುತ್ತಾರೆ ಎಂದು ತಿಳಿಸಿದರು ಹಾಗೂ ಈ ಹಿಂದೆ ತಾಹಸಿಲ್ದಾರ್‌ರವರಿಗೆ ಬಿಬಿಎಂಪಿಯಿಂದ ಪತ್ರ ಬರೆದು ಸರ್ವೆ ಮಾಡಿ ಈ ಜಾಗವನ್ನು  ಬಿಬಿಎಂಪಿಗೆ ಹಸ್ತಾಂತರಿಸಲು ಕೋರಲಾಗಿದ್ದು. ಆದರೆ ಯಾವುದೆ ಕ್ರಮ ಕೈಗೊಂಡಿರುವುದಿಲ್ಲ.  ಆದ್ದರಿಂದ ತಾಹಸಿಲ್ದಾರ್‌ರವರಿಗೆ ಮತ್ತೊಮ್ಮೆ ಪತ್ರ ಬರೆಯಬೇಕಾಗಿ ಕೋರಿದರು. ಹಾಗೂ ಮಾತನಾಡಿ ಥಣಿಸಂದ್ರ ಮುಖ್ಯ ರಸ್ತೆಯಲ್ಲಿ ಮಳೆ ನೀರು ಚರಂಡಿಗೆ ಹೋಗಲು Shoulder Drain ಗಳನ್ನು ನಿರ್ಮಿಸಿದ್ದು, ಆದರೆ Shoulder Drain ಗಳಿಗೆ ಜಾಲರಿ ಹಾಕಿರುವುದಿಲ್ಲ. ಇದರಿಂದ Drain ಗೆ ಪ್ಲಾಸ್ಟಿಕ್, ಮಣ್ಣು ಹಾಗು ಇತರೆ ವಸ್ತುಗಳು ಚರಂಡಿಗೆ ಹೋಗುವ ಸಾದ್ಯತೆ ಹೆಚ್ಚಾಗುತ್ತದೆ. ಆದ್ದರಿಂದ ಕೂಡಲೆ Shoulder Drain ಗಳಿಗೆ ಜಾಲರಿ ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳಲು ಕೋರಿದರು.
- **ರಾಚೇನಹಳ್ಳಿ ಮುಖ್ಯ ರಸ್ತೆಯಲ್ಲಿ ಥಣಿಸಂದ್ರ ವೃತ್ತದಿಂದ** ಮಾನ್ಯತ ಗೇಟ್ ನಂ 5 ರವರೆಗೆ ಚರಂಡಿಗಳು ಬ್ಲಾಕ್ ಆಗಿ ಮಳೆ ಬಂದಾಗ ರಸ್ತೆಯಲ್ಲಿ ನೀರು ಬರುತ್ತಿರುವ ಕಾರಣ ಕೂಡಲೆ ಮೂಭೂತ ಸೌಕರ್ಯ ಯೋಜನ ವಿಭಾಗದಿಂದ ಚರಂಡಿಯಲ್ಲಿನ ಹೂಳು ತೆಗೆದು ಮಳೆ ನೀರು ಸರಾಗವಾಗಿ ಹೊಗುವಂತೆ ಮಾಡಬೇಕಾಗಿ ಸಾರ್ವಜನಿಕರು  ಸಭೆಯಲ್ಲಿ ಕೋರಿದರು.
- **ಶ್ರೀ ದಾಸಪ್ಪ ಹೆಗಡೆನಗರ ರವರು ಮಾತನಾಡಿ** ಹೆಗಡೆನಗರದ ಪೂರ್ವ ಭಾಗದಲ್ಲಿ ಚರಂಡಿಗಳಲ್ಲಿನ ಹೂಳು ತೆಗೆಯುವುದು ಅವಶ್ಯಕವಾಗಿರುತ್ತದೆ ಎಂದು ತಿಳಿಸಿದರು.
- **ಥಣಿಸಂದ್ರ ಸರ್ಕಾರಿ ಶಾಲೆ ಆಹ್ವಾರಣದಲ್ಲಿ** ಶಾಲೆ ಸಮಯ ಮುಗಿದ ನಂತರ ಕೆಲವು ಹುಡುಗರು ಗುಂಪಾಗಿ ಸೇರಿ ಅನೈತಿಕ ಚಟುವಟಿಕೆ ನಡೆಸುತ್ತಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಸಂಭಂದ ಪಟ್ಟ ಪೊಲೀಸ್ ಠಾಣೆಯವರು ಸೂಕ್ತ ಕ್ರಮ ವಹಿಸಲು ಶ್ರೀ ಸಮೀರ್ ರವರು ಕೋರಿದರು.
- **ಶಿವಯ್ಯ ಮಾತನಾಡಿ** ಕೂಡಲೆ ಹೆಗಡೆನಗರದ ಪೂರ್ವ ಭಾಗದ ರಸ್ತೆಯ ಅಭಿವೃದ್ದಿ ಕಾಮಗಾರಿಗಳು ಪೂರ್ಣಗೊಳಿಸಲು ಕೋರಿದರು.

ಕೊನೆಯದಾಗಿ ಮಾನ್ಯ ನೋಡಲ್ ಅಧಿಕಾರಿಗಳು, ವಾರ್ಡ್ ಸಮಿತಿರವರು ಮಾತನಾಡಿ ಈವರೆಗೂ ಸಭೆಯಲ್ಲಿ ಚರ್ಚಿಸಿರುವ ಎಲ್ಲಾ ವಿಷಯಗಳನ್ನು ಗಂಬೀರವಾಗಿ ಪರೀಗಣಿಸಿ ಎಲ್ಲಾದೂರು ಮತ್ತು ಸಲಹೆ ಮತ್ತು ಸೂಚನೆಗಳನ್ನು ಕಾರ್ಯರೂಪಕ್ಕೆತರಲುಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಅಗತ್ಯಕ್ರಮ ಕೈಗೊಳ್ಳುವಂತೆ ಸೂಚಿಸುತ್ತಾ ಸಭೆಗೆ ಹಾಜರಾಗಿದ್ದ ಎಲ್ಲಾ ಅಧಿಕಾರಿಗಳಿಗೆ ಹಾಗೂ ವಿವಿಧ ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಹಾಜರಾಗಿರುವ ಸಾರ್ವಜನಿಕರಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

06.08.2022

**ಕಾರ್ಯದರ್ಶಿ**
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 06, (ಥಣಿಸಂದ್ರ)

6/8/2022

**ನೋಡಲ್ ಅಧಿಕಾರಿಗಳು**
ವಾರ್ಡ್ ಸಮಿತಿ, ವಾರ್ಡ್ ನಂ. 06(ಥಣಿಸಂದ್ರ)
ಹಾಗೂ ಸ.ಕಾ.ಅ ಬ್ಯಾಟರಾಯನಪುರ ಉಪ ವಿಭಾಗ
ಬಿಬಿಎಂಪಿ, ಬೆಂಗಳೂರು

ಪ್ರತಿಯನ್ನು.

1. ಕೌನ್ಸಿಲ್ ಕಾರ್ಯದರ್ಶಿ, ಬಿಬಿಎಂಪಿ ಕೇಂದ್ರಕಛೇರಿ, ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಜಂಟಿ ಆಯುಕ್ತರು, ಯಲಹಂಕ ವಲಯ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಮುಖ್ಯ ಅಭಿಯಂತರರು, ಯಲಹಂಕ ವಲಯರವರಿಗೆ ಅವಗಾಹನೆಗೆ ಸಲ್ಲಿಸಿದೆ.
4. ಕಂದಾಯ ಅಧಿಕಾರಿಗಳು (ಯಲಹಂಕ) ಬೆಂಗಳೂರು ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗರವರಿಗೆ ಸಲ್ಲಸಿದೆ
6. ಕಛೇರಿಕಡತಕ್ಕೆ.